Sri T. SUBRAMANYA.—The District Board did not agree to give its quota till the year 1955 because there were two hospitals within five miles of this village—one at Rayalpad and another at Gavanpalli. That is the reason why the matter was delayed.

Sri B. L. NARAYANASWAMY.—Now that the District Board has agreed, will the Government accord sanction in the current year?

Sri T. SUBRAMANYA.—The matter is under the consideration of the Director of Medical Services. After his recommendations are received by Government, Government will apply its mind.

Starting of Bus Line from Arsikere to Udipi.

*Q—570. Smt. D Y A V A M M A (Gandasi).—

Will the Government be pleased to state.—

(a) whether it has come to their notice that a representation signed by about 25 M.L.As. has been submitted requesting them to open a bus line from Arasikere to Udipi;

(b) whether they are aware that no action has been taken so far although it was submitted nearly a year ago;

(c) whether they would make arrangements for the running of either Government Buses or Private Buses to facilitate pilgrims to visit such holy places?

A.—Sri B. D. JATTI (Chief Minister).—

(a) A representation signed by 15 Memmbers of the Legislative Assembly was submitted to the Chairman, State Transport Authority.

(b) Action was taken on the representation by the competent authority, *viz.*, Regional Transport Authorities;

(c) The regional Transport authority has already considered the matter and Government Buses are to be introduced after the routes in the Hassan pocket are nationalised.

ಶ್ರೀಮತಿ ದ್ಯಾವಮ್ಮ.—ಯಾವ ಯಾವ ಸ್ಥಳಗಳಿಗೆ ಹೋಗಬೇಕೆಂದು ಹೇಳಿರುವ ಹೆಸರುಗಳನ್ನು ಹೇಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ತಾಪು ಅರಸೀಕೆರೆಯ ಮಾತನ್ನು ಹೇಳಿದ್ದೀರಿ. ಮತ್ತಾವುದೂ ಇಲ್ಲ.

ಶ್ರೀಮತಿ ದ್ಯಾವಮ್ಮ.—ಯಾವ ಯಾವ ಯಾತ್ರಾ ಸ್ಥಳಗಳಿಗೆ ಬಸ್ಸುಗಳನ್ನು ಕಳುಹಿಸಬೇಕೆಂದು ಹೇಳಿರುವ ಹೆಸರುಗಳನ್ನು ತಿಳಿಸಲಾಗುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ತಿಳಿಸುತ್ತೇನೆ. ಹಳೇಬೀಡು, ಬೇಲೂರು, ಧರ್ಮಸ್ಥಳ, ಕಾರ್ಕಳ ಮತ್ತು ಉಡುಪಿ.

ಶ್ರೀಮತಿ ದ್ಯಾವಮ್ಮ.—ಯಾತ್ರಾ ಸ್ಥಳಗಳಿಗೆ ಹೆಚ್ಚಾಗಿ ಪ್ರಯಾಣಿಕರು ಹೋಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಗೊತ್ತಿದೆ.

ಶ್ರೀಮತಿ ದ್ಯಾವಮ್ಮ.—ಹಾಗಿದ್ದರೆ ಅಲ್ಲಿ ಹೋಗಿ ಬರುವ ಪ್ರಯಾಣಿಕರಿಗೆ ಏನಾದರೂ ಅನುಕೂಲವನ್ನು ಮಾಡಿಕೊಡಬೇಕೆಂದು ಸರ್ಕಾರ ಆಲೋಚಿಸಿದೆಯೇ?

ಶ್ರೀ ಬಿ. ಡಿ. ಜತ್ತಿ.—ಅಲ್ಲಿ ಈಗ ಬೇರೆ ಬೇರೆ ಪ್ರೈವೇಟು ಬಸ್ಸುಗಳು ಓಡಾಡುತ್ತಿವೆ.

ಶ್ರೀ ಬಿ. ಎನ್. ಬೋರಣ್ಣ ಗೌಡ.—ಅಲ್ಲಿ ಎಷ್ಟು ಬಸ್ಸುಗಳು ಓಡಾಡುತ್ತಿವೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಎಕ್ಸ್‌ಪ್ರೆಸ್ಸು ಬಸ್ಸು ಮತ್ತು ಗವರ್ನಮೆಂಟಿನ ಬಸ್ಸುಗಳನ್ನು ಅಲ್ಲಿ ಇನ್ನೂ ಕೊಡಲಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಇನ್ನೂ ನ್ಯಾಷನಲೈಸು ಆಗಿಲ್ಲ ಮತ್ತು ಹಾಸನದಲ್ಲಿ ಒಂದು ವರ್ಕ್‌ಷಾಪು ಕೂಡ ಹೊಸೈದು ಮಾಡಬೇಕೆನ್ನುವ ಯೋಚನೆ ಇದೆ. ಮತ್ತು ಬಸ್ಸುಗಳಿಗಾಗಿ ಸರ್ಕಾರ ಡಿಪೋವನ್ನು ಮಾಡಬೇಕಾಗಿದೆ.

ಶ್ರೀ ಬಿ. ಎಸ್. ಬೋರಣ್ಣ ಗೌಡ.—ಪ್ರೈವೇಟು ಬಸ್ಸುಗಳು ಹೋಗುವುದಕ್ಕೆ ಸರ್ಕಾರ ಪರ್ಮಿಷನ್ನು ಎಷ್ಟಾದರೂ ಕೊಡುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ಪರ್ಮಿಷನ್ನು ಸರ್ಕಾರ ಕೊಡುವುದಿಲ್ಲ. ಆರ್.ಟಿ.ಎ. ಕೊಡುತ್ತಾರೆ.

ಶ್ರೀ ಕೆ. ಟಿ. ದಾಸಪ್ಪ.—ಹದಿನೈದು ಜನ ವಿಧಾನ ಸಭೆಯ ಸದಸ್ಯರುಗಳು ಯಾವ ತಾರೀಖಿನಲ್ಲಿ ಸಹಿ ಹಾಕಿ ಸರ್ಕಾರಕ್ಕೆ ಕೊಟ್ಟಿದ್ದಾರೆ?

ಶ್ರೀ ಬಿ. ಡಿ. ಜತ್ತಿ.—18-3-1958ರಲ್ಲಿ ಎಂದು ಮಾಡಿದ್ದಾರೆ.

ಶ್ರೀ ಕೆ. ಟಿ. ದಾಸಪ್ಪ.—ಈ ಹದಿನೈದು ಜನ ಈ ರೀತಿಯಾಗಿ ಅರ್ಜಿ ಕೊಟ್ಟು ಒಂದು ವರ್ಷಾದರೂ ಇನ್ನೂ ಬಸ್ಸುಗಳು ಪ್ರಾರಂಭವಾಗದೆ ಡಿಲೇ ಆಗುವುದಕ್ಕೆ ಕಾರಣವೇನು?

ಶ್ರೀ ಬಿ. ಡಿ. ಜತ್ತಿ.—ಈ ಮೊದಲೇ ಈ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೆ. ಈ ಕಡೆಗೆ ಇನ್ನು ಲಕ್ಷ ಕೊಡಲು ಈ ಏರಿಯಾ ನ್ಯಾಷನಲೈಸು ಆಗಿಲ್ಲ. ಹಾಸನದಲ್ಲಿ ಡಿಪೋ ಆಗಿಲ್ಲ. ಏನಾದರೂ ಬಸ್ಸುಗಳನ್ನು ಬದಲಾಯಿಸುವಾಗ ಬೇರೆ ಬಸ್ಸುಗಳನ್ನು ಕಳುಹಿಸಲು ಡಿಪೋ ಇರಬೇಕು. ಆ ದೃಷ್ಟಿಯಿಂದ ಏನೂ ಆಗಿಲ್ಲ.

Sri B. V. DESAI.—In view of the fact that Government has taken a decision regarding the nationalisation of transport, will they take care to see that any new route will not be permitted to the private agencies?

Sri B. D. JATTI.—We will have to notify under Chapter IV A and after objections are heard, then we will have

(SRI B. D. JATTI)

clearance certificate. Otherwise it is not possible to do anything.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಉತ್ತರದಲ್ಲಿ ಹೇಳಿರುವಂತೆ ವಿಧಾನ ಸಭೆಯ ಹದಿನೈದು ಜನ ಸದಸ್ಯರು ಸಹಿ ಹಾಕಿದ್ದಾರೆ ಎಂದು ಹೇಳಿದ್ದೀರಲ್ಲ, ಇದರಲ್ಲಿ ವಿರೋಧ ಪಕ್ಷದವರು ಅಥವಾ ಇನ್ನಿತರ ಪಕ್ಷದವರು ಯಾರು ಎನ್ನುವುದೇ ಗೊತ್ತಾಗುವುದಿಲ್ಲ. ಎರಡು ಪಕ್ಷದವರೂ ಸೇರಿ ಕೊಟ್ಟಿದ್ದಾರೆಯೇ? ಹಾಗಿದ್ದರೆ ಅವರುಗಳ ಹೆಸರುಗಳೇನು?

ಶ್ರೀ ಬಿ. ಡಿ. ಜತ್ತಿ.—ಎಲ್ಲ ಪಕ್ಷದವರೂ ಇದ್ದಾರೆ. ಹೆಸರುಗಳು ಈ ರೀತಿ ಇವೆ.

ಶ್ರೀಯುತರಾದ—

1	ಎ. ಆರ್. ಕರಿಸಿದ್ದಪ್ಪ,	M.L.A.	ಅರಸೀಕೆರೆ
2	ದ್ಯಾವಮ್ಮ, ಮಂಜಪ್ಪ	,,	ಗಂಡಸಿ
3	ಬಿ. ಎನ್. ಬೋರಣ್ಣ ಗೌಡ	,,	ಬೇಲೂರು
4	ವೈ. ಮಂಜಯ್ಯ ಶೆಟ್ಟಿ	,,	ಬೈಂದೂರು
5	ಬಿ. ಆರ್. ಕಾರ್ಕಳ	,,	ಸುರತ್ಕಲ್
6	ಬಿ. ಜಗಜೀವನದಾಸ್ ಶೆಟ್ಟಿ	,,	ಬ್ರಹ್ಮಾವರ
7	ವಿ. ಶ್ರೀನಿವಾಸ ಶೆಟ್ಟಿ	,,	ಕುಂದಾಪುರ
8	ಮಂಜಪ್ಪ ಉಲ್ಲಾಳ್	,,	ಕಾರ್ಕಳ (ನಿಮ್ನವರ್ಗ)
9	ಡಾ॥ ಕೆ. ನಾಗಪ್ಪ ಆಳ್ವ	,,	ಪನೆಮಂಗಳೂರು
10	ಯು. ಎಸ್. ನಾಯಕ	,,	ಉಡುಪಿ
11	ಎಸ್. ನುಬ್ಬಯ್ಯ ನಾಯಕ್	,,	ಪುತ್ತೂರು (ನಿಮ್ನವರ್ಗ)
12	ಹೆಚ್. ಕೆ. ಸಿದ್ದಯ್ಯ	,,	ಬೇಲೂರು
13	ಕೆ. ವೆಂಕಟರಮಣ ಗೌಡ	,,	ಪುತ್ತೂರು
14	ಕೆ. ಟಿ. ದಾನಪ್ಪ	,,	ಹಾಸನ
15	ಕೆ. ಕೆ. ಶೆಟ್ಟಿ,	M.L.C.	ಕೋಲಾರ

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಬೆಂಗಳೂರಿನಿಂದ ಅರಸೀಕೆರೆಯ ಮಾರ್ಗವಾಗಿ ಉಡುಪಿಗೆ ಬಸ್ಸನ್ನು ಹೋಗುವಂತೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಸಾಧ್ಯವಾಗಿಲ್ಲ.

ಶ್ರೀ ಎನ್. ಜಿ. ನರಸಿಂಹೇ ಗೌಡ.—ಹಾಸನು ಡಿಸ್ಪೆನ್ಸರಿಯಲ್ಲಿ ಒಂದು ಡಿಪೋವನ್ನು ತೆಗೆಯಬೇಕ ಎಂದು ಒಂದು ವರ್ಷದ ಹಿಂದೆಯೇ ಆರ್ಡರಾಗಿದ್ದರೂ ಇನ್ನೂ ತೆಗೆದಿಲ್ಲ. ಇದನ್ನು ಯಾವಾಗ ತೆಗೆಯುತ್ತೀರಿ? ಮತ್ತು ಹಾಸನದ ರೋಡುಗಳನ್ನು ನ್ಯಾಷನಲೈಸು ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಪರ್ಮಿಷನ್ನಿಗಾಗಿ ಅಪ್ಲೈ ಮಾಡಿದ್ದೇವೆ. ಅದು ಸಿಕ್ಕಿದ ನಂತರ ರೋಡುಗಳನ್ನು ತೆಗೆದುಕೊಳ್ಳಬೇಕೆಂದು according to programme ನಾವು ಈಗಾಗಲೇ ನೋಟಿಫಿಕೇಷನ್ನನ್ನು ಕೂಡ ಕೊಟ್ಟಿದ್ದೇವೆ. ಆದೂ ತಮಗೆ ಗೊತ್ತಿರಬಹುದು.

Need for a High School in Dudda Hobli, Hassan Taluk.

*Q.—572. Smt. DYAVAMMA (Gandasi).—

Will the Government be pleased to state.—

(*a*) the number of Primary and Middle Schools in Dudda Hobli, Hassan Taluk, together with the number of pupils both boys and girls (separate figures for boys and girls may be furnished);

(*b*) the average number of pupils both boys and girls who have passed out of Middle Schools in the above Hobli during the year 1957-58;

(*c*) whether it has come to their notice that three-fourth of students both boys and girls who have passed out of Middle Schools in that Hobli every year have discontinued their further studies for want of a High School?

A.—Sri ANNA RAO GANAMUKHI (Minister for Education).—

(*a*)—

		Boys.	Girls.
Primary Schools	53	2,020	1,551
Middle Schools (incuding NTM Schools.)	4	535	23)

(*b*) Boys ... 53
Girls ... 8

(*c*) No.

ಶ್ರೀಮತಿ ದ್ಯಾವಮ್ಮ.—ಹಾಸನ ತಾಲ್ಲೂಕು ಕೇಂದ್ರುಕ್ಕೂ ದುದ್ದಕ್ಕೂ ಹತ್ತು ಮೈಲಿ ಆಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ನನಗೆ ಗೊತ್ತಿಲ್ಲ.

ಶ್ರೀಮತಿ ದ್ಯಾವಮ್ಮ.—ಈ ಹೋಬಳಿಗೆ ಹೈಸ್ಕೂಲು ಅವಶ್ಯಕತೆ ಇರುವುದು ತಮ್ಮ ಇಲಾಖೆಯವರ ಯೋಜನೆಯಲ್ಲಿ ಸೇರಿಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಯೋಜನೆಯಲ್ಲಿ ಸೇರಿದೆ. ಖಾಸಗಿಯವರು ಒಂದು ಶಾಲೆ ತೆಗೆಯುತ್ತೇವೆಂದು ಹೇಳಿದರೆ, ಸರ್ಕಾರದವರು ಸಹಾಯ ಮಾಡುತ್ತಾರೆ.

ಶ್ರೀಮತಿ ದ್ಯಾವಮ್ಮ.—ಹಾಗಾದರೆ ಅಲ್ಲಿಗೆ ಹೈಸ್ಕೂಲನ್ನು ಕೊಡುತ್ತೀರೋ.

ಶ್ರೀ ಅಣ್ಣಾರಾವ್ ಗಣಮುಖಿ.—ಯಾರಾದರೂ ಹೈಸ್ಕೂಲನ್ನು ತೆರೆಯುತ್ತೇವೆಂದರೆ ಹೈಸ್ಕೂಲು ಕೊಡುತ್ತೇವೆ.